# ಕರ್ನಾಟಕ ಲೋಕಾಯುಕ್ತ

ನಂ.ಕಂಪ್ಲೆಂಟ್/ಉಪಲೋಕ್/ಎಂವೈಎಸ್-6195/2014/ಡಿಆರ್‌ಇ-1

ಬಹುಮಹಡಿಗಳ ಕಟ್ಟಡ,
ಡಾ:ಅಂಬೇಡ್ಕರ್ ವೀದಿ,
ಬೆಂಗಳೂರು.
ದಿನಾಂಕ : 18/8/2017

## ಕರ್ನಾಟಕ ಲೋಕಾಯುಕ್ತ ಕಾಯಿದೆ, 1984 ರ ಕಲಂ 12(3) ರನ್ವಯ ವರದಿ

ವಿಷಯ: ಶ್ರೀ.ರಾಘವೇಂದ್ರ, ಹಿಂದಿನ ಪೊಲೀಸ್ ಉಪ ನಿರೀಕ್ಷಕರು, ಹಾಸನ ನಗರ ಪೊಲೀಸ್ ಠಾಣೆ, ಹಾಸನ ಜಿಲ್ಲೆ, – ಇವರು ಕರ್ತವ್ಯಲೋಪ ಎಸಗಿರುವ ಬಗ್ಗೆ ಇವರ ವಿರುದ್ಧದ ನಡವಳಿ ಕುರಿತು.

******

1) ಶ್ರೀಮತಿ.ಪವಿತ್ರ ಕೋಂ ಲೇಟ್.ಶಿವಣ್ಣ, ಬಿಟ್ಟಿಹಳ್ಳಿ ಗ್ರಾಮ, ದುದ್ದ ಹೋಬಳಿ, ಹಾಸನ ತಾಲ್ಲೂಕು ಮತ್ತು ಜಿಲ್ಲೆ, (ಇನ್ನು ಮುಂದೆ ದೂರುದಾರರು ಎಂದು ಕರೆಯಲ್ಪಡುತ್ತಾರೆ) ಇವರು ಶ್ರೀ.ರಾಘವೇಂದ್ರ, ಪೊಲೀಸ್ ಉಪ ನಿರೀಕ್ಷಕರು, ಹಾಸನ ನಗರ ಪೊಲೀಸ್ ಠಾಣೆ, ಹಾಸನ ಜಿಲ್ಲೆ, (ಇನ್ನು ಮುಂದೆ ಎದುರುದಾರರು ಎಂದು ಕರೆಯಲ್ಪಡುತ್ತಾರೆ) ಇವರ ವಿರುದ್ಧ ದೂರು ಸಲ್ಲಿಸಿದ ಮೇರೆಗೆ, ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ರ ಕಲಂ 9 ರಡಿಯಲ್ಲಿ ದತ್ತವಾದ ಅಧಿಕಾರ ಚಲಾಯಿಸಿ, ವಿಚಾರಣೆಗೆ ತೆಗೆದುಕೊಂಡು ತನಿಖೆ ಮಾಡಿದೆ.

2) ಈ ಪ್ರಕರಣದಲ್ಲಿ ದೂರುದಾರರ ಗಂಡ ಶಿವಣ್ಣ ಇವರ ಸಾವಿನ ಬಗ್ಗೆ ಅನುಮಾನವಿದ್ದು, ಸಾವಿನ ವಿಚಾರವಾಗಿ ಪೊಲೀಸರಿಗೆ ದೂರು ನೀಡಿದ್ದು, ಆದರೆ ಪೊಲೀಸರು ನಿಷ್ಪಕ್ಷಪಾತವಾಗಿ ತನಿಖೆಯನ್ನು ನಡೆಸದೆ ಕೊಲೆ ಪ್ರಕರಣವನ್ನು ಮುಚ್ಚಿ ಹಾಕಿರುತ್ತಾರೆ. ದೂರುದಾರರ ಗಂಡನ ಕೊಲೆ ಮಾಡಿರುವ ವ್ಯಕ್ತಿಗಳನ್ನು ಪತ್ತೆ ಹಚ್ಚಿ ಬಂಧಿಸುವಲ್ಲಿ ವಿಫಲರಾಗಿದ್ದು, ಆ ಬಗ್ಗೆ ಎದುರುದಾರರನ್ನು ವಿಚಾರಿಸಿದರೆ ಅದು ಅವರ ವಿವೇಚನೆಗೆ ಬಿಟ್ಟ ವಿಚಾರ, ಇನ್ನು ಸಹ ತನಿಖೆ ನಡೆಸಲಾಗುತ್ತಿದೆಯೆಂದು ಹೇಳಿದ್ದು, ಪೊಲೀಸ್ ವರಿಷ್ಠಾಧಿಕಾರಿಯವರನ್ನು ಭೇಟಿ ಮಾಡಿದರೂ ಸಹ ಯಾವುದೇ ಕ್ರಮ ಕೈಗೊಂಡಿಲ್ಲವೆಂದು ಅಪಾದಿಸಿ ದೂರನ್ನು ಸಲ್ಲಿಸಿರುತ್ತಾರೆ.

3) ದೂರುದಾರರ ದೂರಿನ ಮೇಲೆ ಎದುರುದಾರರು ಆಕ್ಷೇಪಣೆಯನ್ನು ಸಲ್ಲಿಸಿದ್ದು, ಆಕ್ಷೇಪಣೆಯಲ್ಲಿ ಮೃತ ಶಿವಣ್ಣನ ವಿರುದ್ಧ ಆತನ ಸಹೋದರರು ನೀಡಿರುವ ಮತ್ತು ಶಿವಣ್ಣ ಸಹೋದರರ ವಿರುದ್ಧ ನೀಡಿರುವ ಫಿರ್ಯಾದಿ ಹಾಗೂ ಆ ಬಗ್ಗೆ ದಾಖಲಾಗಿರುವ ಪ್ರಕರಣದ ಬಗ್ಗೆ ತಿಳಿಸಿರುತ್ತಾರೆ. ಮುಂದುವರೆದು ದಿ.15/5/2009 ರಂದು ಬೆಳಿಗೆ 10 ಗಂಟೆಗೆ ರಾಮೇಗೌಡ ಎನ್ನುವರು ಠಾಣೆಗೆ ಹಾಜರಾಗಿ ಅವರ ತಮ್ಮ ಶಿವಣ್ಣ ಕಾಣೆಯಾಗಿರುವ ಬಗ್ಗೆ ದೂರು ನೀಡಿದ ಮೇರೆಗೆ ಠಾಣಾ ಮೊ.ಸಂ.137/2009 ರಂತೆ ಮನುಷ್ಯ ಕಾಣೆಯಾದ ಬಗ್ಗೆ ಕೇಸನ್ನು ದಾಖಲು ಮಾಡಿ ತನಿಖೆ ಕೈಗೊಂಡಿರುತ್ತಾರೆ. ನಂತರದಲ್ಲಿ ದಿ.21/6/2009 ರಂದು ಶ್ರೀ.ರಾಮೇಗೌಡ ಎನ್ನುವರು ಠಾಣೆಗೆ ಹಾಜರಾಗಿ ಬಿಟ್ಟಗೌಡನಹಳ್ಳಿ ಸ್ಮಶಾನದಲ್ಲಿ ಒಂದು ಅಸ್ಥಿಪಂಜರ ಬಿದ್ದಿರುವ ಬಗ್ಗೆ ನೋಡಲಾಗಿ ಅದು ತನ್ನ ತಮ್ಮನಾದ ಶಿವಣ್ಣನ ಅಸ್ಥಿಪಂಜರವೆಂದು ಗುರುತಿಸಿ ಸಾವಿನ ಬಗ್ಗೆ ಕೇಶವೇಗೌಡ

ಮತ್ತು ವೆಂಕಟೇಶ್ ಎನ್ನುವವರ ಮೇಲೆ ಅನುಮಾನವಿರುತ್ತದೆಯೆಂದು ನೀಡಿರುವ ದೂರಿನ ಮೇರೆಗೆ ಠಾಣಾ ಯುಡಿಆರ್.ನಂ.24/2009 ಕಲಂ 174(ಸಿ) ಸಿಆರ್‌ಪಿಸಿ ಯಂತೆ ಪ್ರಕರಣ ದಾಖಲು ಮಾಡಿಕೊಂಡು ತನಿಖೆಯನ್ನು ಕೈಗೊಂಡಿರುತ್ತಾರೆ. ಪ್ರಕರಣದ ಬಗ್ಗೆ ಸ್ಥಳದಲ್ಲಿ ದೊರೆತ ಅಸ್ಥಿಪಂಜರವನ್ನು ಉಪ ಪ್ರಾಧ್ಯಾಪಕರು, ಹಾಸನ ಇನ್ಸಿಟ್ಯೂಟ್ ಆಫ್. ಮೆಡಿಕಲ್ ಸೈನ್ಸ್ ಇವರ ಬಳಿಗೆ ಶವ ಪರೀಕ್ಷೆಗಾಗಿ ಕಳುಹಿಸಿಕೊಟ್ಟಿರುತ್ತಾರೆ. ಶವ ಪರೀಕ್ಷೆ ನಡೆಸಿದ ವೈದ್ಯರು ಸಾವಿಗೆ ಕಾರಣವನ್ನು ತಜ್ಞರ ವರದಿ ಬರುವತನಕ ಕಾಯ್ದಿರಿಸಿದ್ದು, ನಂತರದಲ್ಲಿ ವೈದ್ಯರು ಸಂಗ್ರಹಿಸಿದ ಮೂಳೆ ಮತ್ತು ಅಸ್ಥಿಪಂಜರವನ್ನು ವಿಧಿವಿಜ್ಞಾನ ಪ್ರಯೋಗಾಲಯಕ್ಕೆ ಕಳುಹಿಸಲಾಗಿರುತ್ತದೆ. ನಂತರ ದಿ.23/4/10 ರಂದು 12 ಗಂಟೆಗೆ ಶ್ರೀ.ರಾಮೇಗೌಡ ಇವರು ಹಾಜರಾಗಿ ಶಿವಣ್ಣ ವಾಸವಿದ್ದ ಬಾಡಿಗೆ ಮನೆಯನ್ನು ಖಾಲಿ ಮಾಡುತ್ತಿರುವಾಗ ಅವರ ತಂದೆಯ ಫೋಟೋದ ಹಿಂಭಾಗದಲ್ಲಿ ಮಡಚಿಟ್ಟಿದ್ದ ಒಂದು ಚೀಟಿ ಸಿಕ್ಕಿದ್ದು, ಅದರಲ್ಲಿ ಶಿವಣ್ಣನ ಸಾವಿಗೆ ಕಾರಣ ಅಣ್ಣಂದಿರಾದ ಕೇಶವೇಗೌಡ, ರಾಣಿ, ವೆಂಕಟೇಶ ಮತ್ತು ರಾಧ ಎಂದು ಬರೆದಿದ್ದು, ಅವರುಗಳು ಪ್ರತಿದಿನ ಗಲಾಟೆ ಮಾಡಿದ್ದರಿಂದ, ನೊಂದು ಸಾಯಲು ತೀರ್ಮಾನ ಮಾಡಿ, ಸಾಯುತ್ತೇನೆಂದು ಇದ್ದ ಒಕ್ಕಣೆಯ ಮೇರೆಗೆ ಕೊಟ್ಟ ದೂರನ್ನು ಸ್ವೀಕರಿಸಿ ಹಾಸನ ನಗರ ಪೊಲೀಸ್ ಠಾಣೆ ಮೊ.ಸಂ.179/2010 ಕಲಂ 306, ರೆ/ವಿ.34 ಐಪಿಸಿ ಯಂತೆ ಪ್ರಕರಣ ದಾಖಲಿಸಿಕೊಂಡು ತನಿಖೆಯನ್ನು ಕೈಗೊಂಡಿರುತ್ತಾರೆ. ಸದರಿ ಪತ್ರದ ಬರವಣಿಗೆ ಒಬ್ಬನೇ ವ್ಯಕ್ತಿ ಬರೆದಿರುವ ಬರವಣಿಗೆಯೇ ಇಲ್ಲವೇ ಎಂಬ ಬಗ್ಗೆ ನಿರ್ದೇಶಕರು, ವಿಧಿವಿಜ್ಞಾನ ಪ್ರಯೋಗಾಲಯ, ಮಡಿವಾಳ ಇವರಿಗೆ ವರದಿಯನ್ನು ಸಲ್ಲಿಸಿದ್ದು, ಅವರು ಸ್ವೀಕೃತಿಯನ್ನು ನೀಡಿರುತ್ತಾರೆ. ಪ್ರಕರಣದ ಆರೋಪಿಗಳು ನ್ಯಾಯಾಲಯದಿಂದ ಜಾಮೀನು ಆದೇಶ ಪಡೆದು ಠಾಣೆಗೆ ಹಾಜರಾದವರನ್ನು ಸೂಕ್ತ ಜಾಮೀನಿನ ಮೇಲೆ ಬಿಡುಗಡೆ ಮಾಡುತ್ತಾರೆ. ನಂತರ ವರ್ಗಾವಣೆಯಾದ ಕಾರಣ ಕಡತವನ್ನು ಹಸ್ತಾಂತರಿಸಿರುತ್ತಾರೆಂದು ಹೇಳಿರುತ್ತಾರೆ.

4) ಪ್ರಕರಣದ ವಿಚಾರವಾಗಿ ಪೊಲೀಸ್ ಅಧೀಕ್ಷಕರು, ಹಾಸನ ಜಿಲ್ಲೆ ಇವರು ವರದಿಯನ್ನು ಸಲ್ಲಿಸಿದ್ದು, ವರದಿಯಲ್ಲಿ ಮೊ.ಸಂ.175/.2010 ರಂತೆ ದಾಖಲಾದ ಪ್ರಕರಣದಲ್ಲಿ ಡೆತ್ ನೋಟ್‌ನಲ್ಲಿರುವ ಹಸ್ತಾಕ್ಷರಗಳು ಯಾರದೆಂದು ಪುರಾವೆ ಮಾಡುವ ಸಲುವಾಗಿ ರಾಮೇಗೌಡ ಇವರು ಜಾತಿ ದೃಢೀಕರಣ ಪತ್ರವನ್ನು ಹಾಜರು ಪಡಿಸಿ ಅದರ ಮೇಲಿರುವ ಕೈಬರಹ ಮೃತ ಶಿವಣ್ಣದೆಂದು ನುಡಿದ ಮೇರೆಗೆ ಅದನ್ನು ಅಮಾನತ್ತು ಪಡಿಸಿಕೊಂಡು, ನಿರ್ದೇಶಕರು, ವಿಧಿ ವಿಜ್ಞಾನ ಪ್ರಯೋಗಾಲಯ, ಕೈಬರಹ ತಜ್ಞರು, ಬೆಂಗಳೂರು ಇವರಿಗೆ ಕಳುಹಿಸಿಕೊಟ್ಟಿದ್ದು, ಸದರಿಯವರು ಡೆತ್‌ನೋಟ್‌ನೊಂದಿಗೆ ಕಳುಹಿಸಿಕೊಟ್ಟ ಸ್ಯಾಮಪಲ್ ಬರವಣಿಗೆಗೆ ತಾಳೆ ನೋಡಲು ಸಾಕಾಗುತ್ತಿಲ್ಲವೆಂದು ಹಿಂದಿರುಗಿಸಿದ ನಂತರ ಪುನಃ ಫಿರ್ಯಾದುದಾರರಾದ ರಾಮೇಗೌಡ ಇವರಿಗೆ ಅನೇಕ ಬಾರಿ ಪತ್ರಗಳನ್ನು ಬರೆದುದಲ್ಲದೆ, ಶಿವಣ್ಣನ ಹೆಂಡತಿ ಪವಿತ್ರರವರಿಗೆ ಪೊಲೀಸ್ ಸಿಬ್ಬಂದಿ ಮುಖಾಂತರ ಶಿವಣ್ಣನ ಕೈಬರಹಗಳನ್ನು ಸಂಗ್ರಹಿಸುವಂತೆ ತಿಳಿಸಿದ್ದಾಗ್ಯೂ ಕೈಬರಹವನ್ನು ಹಾಜರು ಪಡಿಸದೆ ಮತ್ತು ತನಿಖೆಗೆ ಪೂರಕವಾಗಿ ಸಹಕರಿಸದಿದ್ದ ಕಾರಣ ಮೃತನ ಸಾವಿಗೆ ನಿಖರವಾದ ಕಾರಣವೇನು ಎಂಬುದನ್ನು ಕಂಡುಹಿಡಿಯಲು ಪ್ರಕರಣದಲ್ಲಿ ಸಂಗ್ರಹಿಸಿದ ತನಿಖೆಯ ಸಂಗತಿಗಳ ಆಧಾರದಲ್ಲಿ ಆರೋಪಿತರ ಮೇಲೆ ಯಾವುದೇ

ದೋಷಾರೋಪಣೆ ಹೊರಿಸುವ ಅಂಶಗಳು ವ್ಯಕ್ತವಾಗದ ಕಾರಣ ಡಿ.ವೈಎಸ್.ಪಿ.ಯವರಿಂದ 'ಸಿ' ಅಂತಿಮ ವರದಿ ಸಲ್ಲಿಸಲು ಅನುಮತಿ ಕೋರಿದ್ದು, ಅವರು ಅನುಮತಿ ನೀಡಿದ ಮೇರೆಗೆ 'ಸಿ' ಅಂತಿಮ ವರದಿಯನ್ನು ಸಲ್ಲಿಸಿರುವುದು ಕಂಡುಬರುತ್ತದೆ.

5) ಮುಂದುವರೆದು ತನ್ನ ವರದಿಯಲ್ಲಿ ಮೃತನ ಹೆಂಡತಿ ಪವಿತ್ರ ಇವರು ಜೆ.ಎಂ.ಎಫ್.ಸಿ. ನ್ಯಾಯಾಲಯದಲ್ಲಿ ಖಾಸಗಿ ದೂರು ಪಿ.ಸಿ.ಆರ್.ನಂ.88/13 ದಾಖಲಿಸಿದ್ದು, ಸದರಿ ದಾಖಲಾತಿಯಲ್ಲಿ ಅವರ ಗಂಡ ದಿ.2/5/2009 ರಂದು ಕಾಣೆಯಾಗಿರುವ ಬಗ್ಗೆ ಉಲ್ಲೇಖಿಸಿರುತ್ತಾರೆ. ಈ ಪ್ರಕರಣದಲ್ಲಿ ತನಿಖಾಧಿಕಾರಿಗಳು ಅಸ್ಥಿಪಂಜರದ ಬಳಿ ದೊರೆತ ಮೊಬೈಲ್ ಸಿಮ್‌ನ ಮಾಹಿತಿ ಮತ್ತು ಡಿ.ಎನ್.ಎ.ಪರೀಕ್ಷೆ ಮಾಡಿಸದೆ ಇರುವ ನ್ಯೂನತೆಗಳು ಕಂಡುಬರುತ್ತಿವೆಯೆಂದು ಹೇಳಿರುತ್ತಾರೆ.

6) ದಿ.17/12/2015 ರಂದು ಪೊಲೀಸ್ ಅಧೀಕ್ಷಕರು, ಹಾಸನ ಜಿಲ್ಲೆ ಇವರು ವರದಿಯನ್ನು ಸಲ್ಲಿಸಿ, ಈ ಪ್ರಕರಣದಲ್ಲಿ ತನಿಖಾಧಿಕಾರಿಯ ತನಿಖೆಯಲ್ಲಿ ನ್ಯೂನತೆಗಳು ಕಂಡುಬಂದಿದ್ದು, ಆ ನ್ಯೂನತೆಗಳಿಗೆ ಆ ಸಮಯದಲ್ಲಿ ಹಾಸನ ನಗರ ಠಾಣೆಯಲ್ಲಿ ಪಿ.ಎಸ್.ಐ.ಆಗಿದ್ದ ಶ್ರೀ.ರಾಘವೇಂದ್ರ ಇವರು ಕಾರಣರಾಗಿರುತ್ತಾರೆಂದು ಹೇಳಿರುತ್ತಾರೆ. ಕಡತದಲ್ಲಿರುವ ದಾಖಲಾತಿಗಳನ್ನು ಪರಿಶೀಲಿಸಿದಾಗ, ಈ ಪ್ರಕರಣದಲ್ಲಿ ಪ್ರಕರಣವು ದಾಖಲಾಗಿ 2 ವರ್ಷಗಳು ಕಳೆದಿದ್ದು, ಈ ಪ್ರಕರಣದಲ್ಲಿ ಅಮಾನತ್ತು ಪಡಿಸಿದ ಸ್ವತ್ತುಗಳನ್ನು 2 ಬಾರಿ ಎಫ್.ಎಸ್.ಎಲ್ ಪರೀಕ್ಷೆಗೆ ಬೆಂಗಳೂರಿಗೆ ಕಳುಹಿಸಿದ್ದು, ಅಮಾನತ್ತು ಪಡಿಸಿರುವ ದಾಖಲಾತಿಗಳನ್ನು ಪರೀಕ್ಷೆ ಮಾಡಿ ವರದಿ ನೀಡಲು ಸಾಧ್ಯವಿಲ್ಲವೆಂದು ತಿಳಿಸಿರುತ್ತಾರೆ ಹಾಗೂ ಈ ಪ್ರಕರಣದ ಫಿರ್ಯಾದಿಯವರು ಮೃತರ ಕೈಬರವಣಿಗೆಯನ್ನು ಹಾಜರು ಪಡಿಸದೆ ಮೃತರ ಯಾವ ಕೈಬರವಣಿಗೆಗಳು ಲಭ್ಯವಿಲ್ಲವೆಂದು ತಿಳಿಸಿದ್ದು, ತನಿಖೆಗೆ ಸಹಕರಿಸಿರುವುದಿಲ್ಲ. ಆದ್ದರಿಂದ, ಈ ಪ್ರಕರಣವನ್ನು ಸಾಕ್ಷ್ಯಾಧಾರಗಳ ಕೊರತೆಯೆಂದು ಪರಿಗಣಿಸಿ ನ್ಯಾಯಾಲಯಕ್ಕೆ 'ಸಿ' ಅಂತಿಮ ವರದಿಯನ್ನು ಸಲ್ಲಿಸಲು ಅನುಮತಿ ಕೋರಿ ಪೊಲೀಸ್ ಉಪ ನಿರೀಕ್ಷಕರು, ಹಾಸನ ನಗರ ಪೊಲೀಸ್ ಠಾಣೆ ಇವರು ವರದಿಯನ್ನು ಸಲ್ಲಿಸಿರುವುದು ಕಂಡುಬರುತ್ತದೆ. ಅದನ್ನು ಗಮನಿಸಿದಾಗ, 'ಸಿ' ಅಂತಿಮ ವರದಿಯನ್ನು ಸಲ್ಲಿಸಲು ಪೊಲೀಸ್ ಉಪ ನಿರೀಕ್ಷಕರು ವರದಿಯನ್ನು ಸಲ್ಲಿಸಿದ್ದು ವ್ಯಕ್ತವಾಗುತ್ತದೆ.

7) ಪೊಲೀಸ್ ಅಧೀಕ್ಷಕರು ತಮ್ಮ ವರದಿಯಲ್ಲಿ ತನಿಖಾಧಿಕಾರಿಗಳು ಅಸ್ಥಿಪಂಜರದ ಬಳಿ ದೊರೆತ ಮೊಬೈಲ್ ಸಿಮ್‌ನ ಮಾಹಿತಿ ಮತ್ತು ಡಿ.ಎನ್.ಎ.ಪರೀಕ್ಷೆ ಮಾಡದೆ ತನಿಖೆಯಲ್ಲಿ ನ್ಯೂನತೆಗಳನ್ನು ಮಾಡಿರುತ್ತಾರೆಂದು ಹಾಗೂ ಸದರಿ ನ್ಯೂನತೆಗೆ ಪೊಲೀಸ್ ಉಪ ನಿರೀಕ್ಷಕರಾದ ರಾಘವೇಂದ್ರ ಇವರು ಕಾರಣ ಎಂದು ತಿಳಿಸಿರುವ ಕಾರಣ ಪೊಲೀಸ್ ಉಪ ನಿರೀಕ್ಷಕರಾದ ರಾಘವೇಂದ್ರ ಇವರು ಕರ್ತವ್ಯಲೋಪ ಎಸಗಿರುವುದು ಕಂಡುಬರುತ್ತದೆ. ಆ ಕಾರಣದಿಂದ, ಎದುರುದಾರರು ಶಿಸ್ತು ಕ್ರಮಕ್ಕೆ ಬಾಧ್ಯರಾಗಿರುತ್ತಾರೆ.

8) ಆದುದರಿಂದ, ಎದುರುದಾರರ ಆಕ್ಷೇಪಣೆಯು ಅವರ ಮೇಲಿನ ಆಪಾದನೆಯನ್ನು ಅಲ್ಲಗಳೆಯಲು ಸೂಕ್ತ ಅಥವಾ ಸಮಾಧಾನಕರವಾಗಿರುವುದಿಲ್ಲ ಮತ್ತು ದೂರುದಾರರ ದೂರನ್ನು ಅಲ್ಲಗಳೆಯಲು

ಯಾವುದೇ ಸಮಂಜಸ/ಸಮರ್ಪಕ ಉತ್ತರವನ್ನು ತಮ್ಮ ಆಕ್ಷೇಪಣೆಯಲ್ಲಿ ನೀಡಿಲ್ಲವೆಂಬ ಅಭಿಪ್ರಾಯಕ್ಕೆ ಬಂದಿದೆ.

9) ಈ ಮೇಲ್ಕಂಡ ಎಲ್ಲಾ ಅಂಶಗಳನ್ನು ಗಣನೆಗೆ ತೆಗೆದುಕೊಂಡಾಗ, ಎದುರುದಾರರು ಸಾರ್ವಜನಿಕ/ಸರ್ಕಾರಿ ನೌಕರರಾಗಿ ತಮ್ಮ ಕರ್ತವ್ಯ ನಿರ್ವಹಣೆಯಲ್ಲಿ ನಿಷ್ಠೆ ಇಲ್ಲದ, ಕರ್ತವ್ಯಲೋಪ ಎಸಗಿ ಸರ್ಕಾರಿ ನೌಕರರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡಿರುತ್ತಾರೆಂದು ಮೇಲ್ನೋಟಕ್ಕೆ ಕಂಡುಬರುತ್ತದೆ.

10) ಎದುರುದಾರರು ಸಾರ್ವಜನಿಕ/ಸರ್ಕಾರಿ ನೌಕರರಾಗಿದ್ದು, ತಮ್ಮ ಕರ್ತವ್ಯ ಪರಿಪಾಲನೆಯಲ್ಲಿ ನಿಷ್ಠೆಯನ್ನು ತೋರದೆ, ಕರ್ತವ್ಯಲೋಪವೆಸಗಿ, ದುರ್ವರ್ತನೆ ತೋರಿಸಿ, ಸಾರ್ವಜನಿಕ/ಸರ್ಕಾರಿ ನೌಕರರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡಿರುವುದು ಮೇಲ್ನೋಟಕ್ಕೆ ಕಂಡುಬರುತ್ತಿರುವುದರಿಂದ, ಕರ್ನಾಟಕ ನಾಗರೀಕ ಸೇವೆ (ನಡತೆ) ನಿಯಮ 1966 ರ ನಿಯಮ 3(1)(ii) ಮತ್ತು (iii) ರನ್ವಯ ಶಿಸ್ತು ಕ್ರಮಕ್ಕೆ ಬಾಧ್ಯರಾಗಿರುತ್ತಾರೆಂದು ಕಂಡುಬಂದಿದ್ದರಿಂದ, ಎದುರುದಾರರ ವಿರುದ್ಧ ಶಿಸ್ತು ನಡವಳಿಕೆ ಹೂಡಲು ಮತ್ತು ಹಾಗೆಯೇ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿರ್ಬಂಧ ಮತ್ತು ಮೇಲ್ಮನವಿ) ನಿಯಮಗಳು, 1957 ರ ನಿಯಮ 14-ಎ ರ ಅಡಿಯಲ್ಲಿ, ಎದುರುದಾರರ ವಿರುದ್ಧ ವಿಚಾರಣೆ ನಡೆಸಲು ಈ ಪ್ರಾಧಿಕಾರಕ್ಕೆ ಒಪ್ಪಿಸುವಂತೆ, ಕರ್ನಾಟಕ ಲೋಕಾಯುಕ್ತ ಕಾಯಿದೆ ಕಲಂ 12(3) ರನ್ವಯ ಪ್ರದತ್ತವಾದ ಅಧಿಕಾರದಡಿ, ಶಿಸ್ತು ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಿದೆ.

11) ಮುಂದುವರೆದು, ಕರ್ನಾಟಕ ಲೋಕಾಯುಕ್ತ ಕಾಯಿದೆ ಕಲಂ 12(4) ರ ಪ್ರಕಾರ, ಶಿಸ್ತು ಪ್ರಾಧಿಕಾರವು ವರದಿಯಂತೆ ಕ್ರಮ ಕೈಗೊಂಡು ಅಥವಾ ಕೈಗೊಳ್ಳಬಹುದಾದ ಕ್ರಮವನ್ನು ಈ ವರದಿ ತಲುಪಿದ ದಿನಾಂಕದಿಂದ **ಮೂರು ತಿಂಗಳೊಳಗಾಗಿ** ಈ ಪ್ರಾಧಿಕಾರಕ್ಕೆ ತಿಳಿಸಲೂ ಹೇಳಿದೆ.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

19-8-17.

(ನ್ಯಾಯಮೂರ್ತಿ ಸುಭಾಷ್ ಬಿ. ಆಡಿ)
ಉಪಲೋಕಾಯುಕ್ತರು-2,
ಕರ್ನಾಟಕ ರಾಜ್ಯ, ಬೆಂಗಳೂರು.